**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 1101/2011</u>**

ದಿನಾಂಕಃ. **31.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**3** | ಪ್ರಾಸಾ-**2** |
|---|---|
| ಹೆಸರು | - ಕೃಷ್ಣ |
| ತಂದೆ ಹೆಸರು | - ಮುತ್ತುಶೆಟ್ಟಿ |
| ವಯಸ್ಸು | - **48** |
| ಉದ್ಯೋಗ | - ವ್ಯಾಪಾರ |
| ವಿಳಾಸ | - ನಲ್ಲಹಳ್ಳಿ ಗ್ರಾಮ |

**<u>ಮುಖ್ಯವಿಚಾರಣೆ : ಮಾನ್ಯ ಪ್ರಭಾರ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ಈಗ **14-15** ವರ್ಷಗಳ ಹಿಂದೆ ಮದ್ಯಾಹ್ನ **3** ಗಂಟೆಗೆ ನಾನು ನನ್ನ ಊರಿನ ನನ್ನ ಜಮೀನಿನ ಬಳಿ ಇದ್ದಾಗ ಚಾ.ಸಾ. **1** ರವರು ಕೂಗಿಕೊಂಡರು. ಆಗ ನಾನು ಹೋದೆ. ಅಷ್ಟರಲ್ಲಿ ಪುಟ್ಟಮ್ಮ ಎನ್ನುವವರು ಸಹ ಅಲ್ಲಿಗೆ ಬಂದಿದ್ದರು. ಆರೋಪಿತರು ಚಾ.ಸಾ. **1** ರವರ ಸೀರೆಯನ್ನು ಹಿಡಿದು ಎಳೆದಾಡಿ ಕೈಯನ್ನು ಹಿಡಿದು ಎಳೆದಾಡಿ ಓಡಿ ಹೋಗಿದ್ದರು. ನಂತರ ನಾನು ಈ ವಿಷಯದ ಬಗ್ಗೆ ಊರಿನವರಿಗೆ ತಿಳಿಸಿದೆ ಮತ್ತು ಚಾ.ಸಾ. **1** ರವರು ಈ ಬಗ್ಗೆ ದೂರು ಕೊಟ್ಟಿದ್ದಾರೆ. ಘಟನೆಯ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲು: 1ನೇ ಆರೋಪಿ ಪರ ಶ್ರೀ. ಎಲ್.ಎ.ಡಿ.ಸಿ. ವಕೀಲರಿಂದಃ</u>**

ನಾನು ಮತ್ತು ಚಾ.ಸಾ. 1 ರವರು ರಾಜಮ್ಮ ಸಂಬಂಧಿಕರು ಎಂದರೆ ಸರಿ. ಘಟನೆ ನಡೆದಾಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 50 ಮೀಟರ್ ದೂರದಲ್ಲಿ ಇದ್ದೆ. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಚಾ.ಸಾ. 1 ರವರ ಹೇಳಿಕೆಯ ಮೇಲೆ ನನ್ನ ಹೇಳಿಕೆಯನ್ನು ಕೊಟ್ಟಿದ್ದೇನೆ. ಆರೋಪಿತರು ಕೈ ಹಿಡಿದು ಎಳೆದಾಡಿರುವುದಿಲ್ಲ, ಸೀರೆ ಹಿಡಿದು

ಎಳೆದಾಡಿರುವುದಿಲ್ಲ, ಬೈದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ. 1 ಮತ್ತು ಆರೋಪಿತರ ನಡುವೆ ಜಮೀನಿನ ವಿಚಾರವಾಗಿ ವೈಷಮ್ಯ ಇತ್ತು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಆದರೆ ಪ್ರಕರಣ 2011 ನೇ ಸಾಲಿನ ಪ್ರಕರಣ ಆಗಿರುವುದರಿಂದ ಮತ್ತು ಸಕಾರಣ ಇಲ್ಲದೇ ಇರುವುದರಿಂದ ಸಮಯಾವಕಾಶವನ್ನು ತಿರಸ್ಕರಿಸಲಾಯಿತು)

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**